4. ಹಿಂದಿನ ಶಾಸಕರಾದ ಶ್ರೀ ಬಸವನಗೌಡ ಇವರು ಹಿಂದಿನ ಯುವಜನ ಸೇವಾ ಮತ್ತು ಕ್ರೀಡಾ ಸಚಿವರಾದ ಶ್ರೀ ಬಿ.ಎಲ್.ಶಂಕರ್ ಇವರಿಗೆ ಪ್ರಸ್ತಾವನೆ ಸಲ್ಲಿಸಿದ ಮೇರೆಗೆ ಮಾನ್ಯ ಕ್ರೀಡಾ ಸಚಿವರು ಶ್ರೀಮತಿ ಮಾರ್ಗರೆಟ್ ಆಳ್ವ ಹಿಂದಿನ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ಸಚಿವರಿಗೆ ಶ್ರೀ ಬಸವನಗೌಡ ಶಾಸಕರು ಇವರ ಪ್ರಸ್ತಾವನೆಯನ್ನು ಪರಿಗಣಿಸಿ ತೀರ್ಥರಾಮೇಶ್ವರದಲ್ಲಿ ಯುವಜನ ವಸತಿ ನಿಲಯವನ್ನು ನಿರ್ಮಾಣ ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದ ಮೇರೆಗೆ ಶ್ರೀಮತಿ ಮಾರ್ಗರೆಟ್ ಆಳ್ವ ಇವರು ತೀರ್ಥ ರಾಮೇಶ್ವರದಲ್ಲಿ ಯುವಜನ ವಸತಿ ನಿಲಯವನ್ನು ನಿರ್ಮಾಣ ಮಾಡಲು ಅನುಮತಿ ನೀಡಲಾಗಿದೆಯೆಂದು ಈ ಬಗ್ಗೆ ಜಮೀನು ಆಯ್ಕೆ ಮಾಡುವಂತೆ ಸೂಚಿಸಿದ್ದರ ಮೇರೆಗೆ ಹಿಂದಿನ ಜಿಲ್ಲಾಧಿಕಾರಿಗಳು ಶಿವಮೊಗ್ಗ ಇವರು ಸದರಿ ಸ್ಥಳವನ್ನು ಸ್ಥಳೀಯ ಶಾಸಕರು ಮತ್ತು ಸಾರ್ವಜನಿಕರೊಂದಿಗೆ ಸಮಾಲೋಚಿಸಿ ಯುವಜನ ವಸತಿ ನಿಲಯವನ್ನು ನಿರ್ಮಾಣ ಮಾಡಲು ಸದರಿ ಸ್ಥಳವನ್ನು ಆಯ್ಕೆ ಮಾಡಿರುತ್ತಾರೆ.

ತರೀಕೆರೆ ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯ ಕಾಮಗಾರಿಗಳು.

590(596)

ಶ್ರೀ ನೀಲಕಂಠಪ್ಪ (ತರೀಕೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ತರೀಕೆರೆ ತಾಲ್ಲೂಕಿನಲ್ಲಿ 1998-99, 99-2000, 2000-01 ಇಲ್ಲಿಯವರೆಗೆ ನಬಾರ್ಡ್ ಯೋಜನೆಯಲ್ಲಿ ತೆಗೆದುಕೊಂಡ ರಸ್ತೆ ಕಾಮಗಾರಿಗಳು ಎಷ್ಟು? ಹಾಗೂ ಎಷ್ಟು ಕಿಮೀಗಳು? ಈ ಕಾಮಗಾರಿಗಳು ಯಾವ ಹಂತದಲ್ಲಿವೆ.

2. ಈ ಕಾಮಗಾರಿ ಕೆಲಸವನ್ನು ಯಾವ ಗುತ್ತಿಗೆದಾರರಿಗೆ ವಹಿಸಲಾಗಿದೆ?

3. ಕಳಪೆ ಕಾಮಗಾರಿ ಮಾಡಿದ ಗುತ್ತಿಗೆದಾರರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ತರೀಕೆರೆ ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯಡಿ 98-99, 99-2000 ಮತ್ತು 2000-2001ರಲ್ಲಿ ಮಂಜೂರಾದ ರಸ್ತೆ ಕಾಮಗಾರಿಗಳು ಕೆಳಕಂಡಂತೆ ಇವೆ.

98-99	4ರಸ್ತೆ	18.40ಕಿಮೀ
99-2000	ಇಲ್ಲ	ಇಲ್ಲ
2000-01	3 ರಸ್ತೆ	19.38 ಕಿಮೀ

ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

2. ವಿವರವನ್ನು ಅನುಬಂಧದಲ್ಲಿ ನೀಡಿದೆ.

3. ಕಳಪೆ ಕಾಮಗಾರಿ ಇಲಾಖೆಯ ಗಮನಕ್ಕೆ ಬಂದಿರುವಲ್ಲಿ, ಅಂತಹ ಕಾಮಗಾರಿಗಳನ್ನು ಗುಣನಿಯಂತ್ರಣಾ ಅಧಿಕಾರಿಗಳಿಂದ ಪರಿವೀಕ್ಷಿಸಲು ಕ್ರಮಕೈಗೊಳ್ಳಲಾಗುತ್ತಿದ್ದು ಅದರಂತೆ ಗುತ್ತಿಗೆದಾರರಿಂದ ಸರಿಪಡಿಸಲಾಗುವುದು, ಹಾಗೂ ಗುತ್ತಿಗೆ ಷರತ್ತಿನಂತೆ ಕ್ರಮಕೈಗೊಳ್ಳಲಾಗುವುದು.

ಅನುಬಂಧ-(ಆ)

ತರೀಕೆರೆ ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ತೆಗೆದುಕೊಂಡ ರಸ್ತೆ ಕಾಮಗಾರಿಗಳ ವಿವರ (ಎಲ್ಎಕ್ಯೂ: 596ಕ್ಕೆ) ಉತ್ತರ.

ಕ್ರಮ ಸಂಖ್ಯೆ	ರಸ್ತೆಯ ಹೆಸರು	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)	ಅಭಿವೃದ್ಧಿ ಪಡಿಸುವ ಉದ್ದ ಕಿಮೀಗಳಲ್ಲಿ
ಪಿಡಬ್ಲ್ಯೂಡಿ - ಆರ್ಐಡಿಎಫ್ - (98-99)			
1)	ತರೀಕೆರೆ - ಹೊಸದುರ್ಗ ರಸ್ತೆಯಿಂದ ತರೀಕೆರೆ ಹೊಸದುರ್ಗ ರಸ್ತೆ.	12.10	3.10
2)	ಕಲ್ಲೇನಹಳ್ಳಿ-ಕಾರೇಹಳ್ಳಿ ರಸ್ತೆಯಿಂದ ಬೀರೂರು ಶಿವನಿಗೆ ಸೇರುವ ರಸ್ತೆ (ತಮಟದಹಳ್ಳಿ ಕಣಪೆ ರಸ್ತೆ)	23.00	7.00
3)	ತರೀಕೆರೆ - ರಾಗಿಕೆರೆ ನಾಗೇನಹಳ್ಳಿ ಅಮೃತಾಪುರ ಕುಂಚಿನ ಮರು ನೇರಲೇಕೆರೆ ರಸ್ತೆ.	11.92	3.10
4)	ಅಜ್ಜಂಪುರ - ಕಣಬಗಟ್ಟ ರಸ್ತೆಯಿಂದ ಶಿವನಿ ಬುಕ್ಕಾಂಬುಧಿ ರಸ್ತೆ.	29.10	5.20
		ಒಟ್ಟು	72.12
ಪಿಡಬ್ಲ್ಯೂಡಿ : ಆರ್ಐಡಿಎಫ್:6(2000-2001)			
1)	ತರೀಕೆರೆ ಹಾದಿಕೆರೆ ನೇರಲೇಕೆರೆ ರಸ್ತೆ	23.20	4.40
2)	ತರೀಕೆರೆ-ಮಂಗಳೂರು ರಸ್ತೆಯಿಂದ ಹಲಸೂರು ಮೂಲಕ ಕೆಂಚಿಕೊಪ್ಪ	45.00	5.75

ಗುತ್ತಿಗೆದಾರರ ಹೆಸರು	ಜನವರಿ 2001ರ ಅಂತ್ಯದವರೆಗೆ ಆದ ವೆಚ್ಚ (ಲಕ್ಷಗಳಲ್ಲಿ)	ಕಾಮಗಾರಿ ಹಂತ
ಶ್ರೀ ಪಿ.ಒ.ಚಂದ್ರಶೇಖರ್‌ಮೂರ್ತಿ	7.83	ಪೂರ್ಣಗೊಂಡಿದೆ.
ಶ್ರೀ ಎಂ.ರಾಘವೇಂದ್ರ	24.06	- '' -
ಶ್ರೀ ಪಿ.ಒ.ಚಂದ್ರಶೇಖರಮೂರ್ತಿ	7.65	- '' -
ಶ್ರೀ ಶಾಂತೇಗೌಡ, (ಜಿ.ಪಿ.ಎ.ಟು ಟಿ ರವಿ)	20.23	ಜಲ್ಲಿ ಬಿಚಾವಣೆ ಪ್ರಗತಿಯಲ್ಲಿದೆ.
18.40		59.77
-	-	ಟೆಂಡರ್ ಕರೆಯಲಾಗಿದೆ.
-	-	-''-

3)	ಎಂ.ಸಿ.ಹಳ್ಳಿಯಿಂದ ಕರಕುಟ್ಟಿ ಮೂಲಕ ಬಾವಿಕೆರೆ ರಸ್ತೆ.	50.00	9.23
	ಒಟ್ಟು	118.00	19.38

- - -''-